ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

# ಸಂಪುಟ ವಿಸ್ತರಣೆ ನಾಳಿದ್ದು

## 13 ಜನರ ಸೇರ್ಪಡೆಗೆ ವರಿಷ್ಠರ ಒಪ್ಪಿಗೆ

ಬೆಂಗಳೂರು: ಮುಂದಿನ ಸೋಮವಾರ (ಫೆ,3) ಸಂಪುಟ ವಿಸ್ತರಣೆ ಬಹುತೇಕ ಖಚಿತವಾಗಿದೆ. ಉಪಚುನಾವಣೆಯಲ್ಲಿ ಗೆದ್ದ 11 ಮಂದಿ ಅರ್ಹ ಶಾಸಕರ ಪೈಕಿ ಅಥಣಿಯ ಮಹೇಶ್ ಕುಮಟಳ್ಳಿ ಹೊರತಾಗಿ 10 ಮಂದಿ ಸಂಪುಟ ಸೇರಲಿದ್ದಾರೆ. ಬಿಜೆಪಿಯ ಮೂವರು ಶಾಸಕರಿಗೆ ಭಾಗ್ಯ ಒಲಿದಿದೆ.

ಶುಕ್ರವಾರ ಮಧ್ಯಾಹ್ನ ಸಂಸತ್ ಭವನದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಪಕ್ಷದ ಅಧ್ಯಕ್ಷ ಜೆಪಿ ನಡ್ಡಾ ಅವರನ್ನು ಮುಖ್ಯಮಂತ್ರಿ ಯಡಿಯೂರಪ್ಪ ಭೇಟಿ ಆದ ಸಂದರ್ಭದಲ್ಲಿ ವಿಸ್ತರಣೆ ಬಿಕ್ಕಟ್ಟು ಬಗೆಹರಿದಿದೆ. ಮುಖ್ಯಮಂತ್ರಿಗಳು ಮುಂದಿಟ್ಟ ಸಂಭವನೀಯ ಸಚಿವರ ಪಟ್ಟಿಗೆ ವರಿಷ್ಠರು ಒಪ್ಪಿಗೆ ಸೂಚಿಸಿದ್ದಾರೆ. ಆದರೆ ಉಪಚುನಾವಣೆಯಲ್ಲಿ ಸೋತ ಎಚ್.ವಿಶ್ವನಾಥ್, ಎಂಟಿಬಿ ನಾಗರಾಜ್ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಸಮ್ಮತಿ ನೀಡಿಲ್ಲ. ಭೇಟಿಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಯಡಿಯೂರಪ್ಪ ಯಾವಾಗ ಬೇಕಾದರೂ ಸಂಪುಟ ವಿಸ್ತರಣೆ ಮಾಡಿ ಅಂದಿದ್ದಾರೆ. 2–3 ದಿನಗಳಲ್ಲಿ ವಿಸ್ತರಣೆಯಾಗಲಿದೆ. ನಾವು ಕೊಟ್ಟ ಪಟ್ಟಿಗೆ ಅವರು ಸಮ್ಮತಿ ಸೂಚಿಸಿದ್ದಾರೆ. ನಾನು ಅಂದುಕೊಂಡಿದ್ದು ಎಲ್ಲವೂ ಆಗಿದೆ ಎಂದು ಹರ್ಷದಿಂದ ಹೇಳಿದರು. ಮುಖ್ಯಮಂತ್ರಿಗಳು ಶುಕ್ರವಾರ ರಾತ್ರಿ ಬೆಂಗಳೂರಿಗೆ ಮರಳಿದ್ದಾರೆ. ಶನಿವಾರ ಪಕ್ಷದ ಮುಖಂಡರ ಜತೆ ಚರ್ಚಿಸಿ ವಿಸ್ತರಣೆ ಮುಹೂರ್ತ ನಿಗದಿ ಮಾಡಲಿದ್ದಾರೆ. ಬಹುತೇಕ ಸೋಮವಾರ ವಿಸ್ತರಣೆ. ಪಕ್ಷದ ಮುಖಂಡರೂ ಮಾಜಿ ಸಚಿವರೂ ಆದ ಅರವಿಂದ ಲಿಂಬಾವಳಿಗೆ ಅವಕಾಶ ಸಿಗಲಿದೆ. ಸಿ.ಪಿ. ಯೋಗೀಶ್ವರ್ ಅಥವಾ ಮೈಸೂರಿನ ರಾಮದಾಸ್ ಸಂಪುಟ ಸೇರಲಿದ್ದಾರೆ. ಆಪರೇಷನ್ ಕಮಲದಲ್ಲಿ ಪ್ರಮುಖ ಪಾತ್ರ ವಹಿಸಿರುವ ಯೋಗೀಶ್ವರ್‌ಗೆ ಹೆಚ್ಚಿನ ಅವಕಾಶವಿದೆ. ಮಾಜಿ ಸಚಿವ ಉಮೇಶ್ ಕತ್ತಿಗೆ ಸ್ಥಾನ ಖಚಿತ.

ಹೊಸದಾಗಿ ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ಮಾಡಲು ಹೈಕಮಾಂಡ್ ಒಪ್ಪಿಗೆ ನೀಡಿಲ್ಲ. ಇದರಿಂದ ಆ ಹುದ್ದೆಯ ಮೇಲೆ ಕಣ್ಣಿಟ್ಟಿದ್ದ ಸಚಿವ ಶ್ರೀರಾಮುಲು ಹಾಗೂ ಗೋಕಾಕ್ ಶಾಸಕ ರಮೇಶ್ ಜಾರಕಿಹೊಳಿಗೆ ನಿರಾಸೆಯಾಗಿದೆ. ಹಾಲಿ ಉಪಮುಖ್ಯಮಂತ್ರಿಗಳ ಹುದ್ದೆಯನ್ನು ಕಿತ್ತುಕೊಳ್ಳಬೇಡಿ ಎಂಬ ಸಂದೇಶದಿಂದ ಉಪಮುಖ್ಯಮಂತ್ರಿಗಳಾದ ಗೋವಿಂದಕಾರಜೋಳ, ಡಾ.ಅಶ್ವತ್ಥನಾರಾಯಣ ಹಾಗೂ ಲಕ್ಷ್ಮಣ ಸವದಿ ನಿರಾಳರಾಗಿದ್ದಾರೆ. ಸವದಿ ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿ ಸಚಿವ ಸ್ಥಾನದಲ್ಲಿ ಮುಂದುವರೆಸಲು ಹೈಕಮಾಂಡ್ ಒಪ್ಪಿದೆ ಎಂದು ಮೂಲಗಳು ತಿಳಿಸಿವೆ.

ಮುಂದಿನ ಜೂನ್‌ನಲ್ಲಿ ಪುನಾರಚನೆ ಬಗ್ಗೆ ಅಮಿತ್ ಶಾ ಸುಳಿವು ನೀಡಿದ್ದಾರೆ. ಸಚಿವರ ಕಾರ್ಯವೈಖರಿ ಆಧಾರದ ಮೇಲೆ ಅದಕ್ಷರನ್ನು ಕೈ ಬಿಟ್ಟು ಹೊಸಬರಿಗೆ ಅವಕಾಶ ಮಾಡಿಕೊಡುವ ಸುಳಿವು ನೀಡಿದ್ದಾರೆ. ಸಂಪುಟಕ್ಕೆ 13 ಮಂದಿಯನ್ನು ಸೇರಿಸಿಕೊಳ್ಳುವುದರಿಂದ ಮೂರು ಸ್ಥಾನಗಳು ಖಾಲಿ ಉಳಿಯಲಿವೆ. ಮುನಿರತ್ನ ರಾಜೀನಾಮೆಯಿಂದ ತೆರವಾಗಿರುವ ರಾಜರಾಜೇಶ್ವರಿ ನಗರ ಹಾಗೂ ಪ್ರತಾಪಗೌಡ ಪಾಟೀಲ್ ರಾಜೀನಾಮೆಯಿಂದ ತೆರವಾಗಿರುವ ಮಸ್ಕಿ ಕ್ಷೇತ್ರಕ್ಕೆ ಉಪಚುನಾವಣೆ ಬಾಕಿಯಿದೆ. ಗೆದ್ದರೆ ಅವರಿಬ್ಬರನ್ನೂ ಮಂತ್ರಿ ಮಾಡಬೇಕಾಗಿದೆ.




- ವಿಸ್ತರಣೆಗೆ ಹೈಕಮಾಂಡ್ ಗ್ರೀನ್ ಸಿಗ್ನಲ್
- ಕುಮಟಳ್ಳಿ ಬಿಟ್ಟು 10 ಮಂದಿ ಅರ್ಹರಿಗೆ ಅವಕಾಶ
- ಸಂಪುಟಕ್ಕೆ ಕತ್ತಿ, ಲಿಂಬಾವಳಿ, ಯೋಗೀಶ್ವರ್/ ರಾಮದಾಸ್
- ಮೂರು ಡಿಸಿಎಂ ಹುದ್ದೆಗಳು ಅಬಾಧಿತ
- ಹೊಸ ಡಿಸಿಎಂ ಹುದ್ದೆ ಸೃಷ್ಟಿಗೆ ನಕಾರ
- ಜೂನ್‌ನಲ್ಲಿ ಪುನಾರಚನೆ ಸುಳಿವು

### ಸಂಭವನೀಯ ಸಚಿವರು

#### ಅರ್ಹರ ಪೈಕಿ

- ಆನಂದ್‌ಸಿಂಗ್
- ಬಿ.ಸಿ. ಪಾಟೀಲ್
- ಬೈರತಿ ಬಸವರಾಜ್
- ಕೆ.ಗೋಪಾಲಯ್ಯ
- ಡಾ.ಸುಧಾಕರ್
- ಕೆಆರ್ ಪೇಟೆ ನಾರಾಯಣಗೌಡ
- ರಮೇಶ್ ಜಾರಕಿಹೊಳಿ
- ಶಿವರಾಮ್ ಹೆಬ್ಬಾರ್
- ಶ್ರೀಮಂತ ಪಾಟೀಲ್
- ಎಸ್‌ಟಿ ಸೋಮಶೇಖರ್

#### ಬಿಜೆಪಿ ಪೈಕಿ

- ಅರವಿಂದ ಲಿಂಬಾವಳಿ
- ಉಮೇಶ್ ಕತ್ತಿ
- ಸಿ.ಪಿ.ಯೋಗೀಶ್ವರ್\ ರಾಮದಾಸ್

#### ಅಂದುಕೊಂಡಂತೆ

ನಾವು ಕೊಟ್ಟ ಪಟ್ಟಿಯನ್ನು ಹೈಕಮಾಂಡ್ ಒಪ್ಪಿಕೊಂಡಿದೆ. ನಾನು ಅಂದುಕೊಂಡಂತೆ ಎಲ್ಲವೂ ಆಗಿದೆ

| ಬಿ.ಎಸ್.ಯಡಿಯೂರಪ್ಪ, ಸಿಎಂ.